# ಕೆಪಿಹೆಚ್‌ಆರ್‌ಎ ವಾರ್ತೆ
# KPHRA VARTHE

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ವಾರ್ತಾ ಪತ್ರಿಕೆ
KPHRA VARTHE ENGLISH & KANNADA MONTHLY Reg. No./KA/BGW-1832/2021-2023 | RNI No. KARBIL/2019/78029 | Posted at Bangalore PSO, Bangalore-560 026 | on 11th or 14th of every Month

ಸಂಪುಟ–23
ಸಂಚಿಕೆ–6
ನವೆಂಬರ್–2023
ಪುಟಗಳು–20
ಬೆಲೆ ರೂ. 10/–

VOLUME-23 | ISSUE - 6 | NOVEMBER 2023 | BANGALORE | PRICE - 10/-




## NEW OFFICE BEARERS OF KSHA FOR 2023-26




ಸವಿಯಿರಿ ಉತ್ತಮವಾದ
ಮಾಡ್ರರ್ನ್ ಕಾಫಿ
Buy The Best
MODERN
COFFEE
TRUST & QUALITY SINCE 1933
MODERN
Coffee
ಮಾಡ್ರರ್ನ್ ಕಾಫಿ
90 Years
Buy the Best
MODERN COFFEE CO.
500 g
P.B. BLEND
ASSAM
DELIGHT
PREMIUM
TEA
250g
EXTRA STRONG PREMIUM TEA
೯೦ ವರ್ಷದ ಪರಂಪರೆಯ ಅನುಭವದ ಸ್ವಾದ
90 Years of Traditional Filter Coffee
For Trade Enquiry Contact : +91 99805 25250
MODERN COFFEE CO
# 35,City Market Frontage, Bangalore-560 002.
Phone : 080 22872346 email: moderncoffee33@gmail.com

KSHA
ESTD 1954
ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ (ರಿ.)
KARNATAKA STATE HOTELS ASSOCIATION (R.)

President
Sri B. Chandrashekar Hebbar
Mob : 98451 17351

Hon. Secretary
Sri G.K. Shetty
Mob: 99800 00060

Tresurer
Sri M.V. Raghavendra Rao
Mob: 98800 93264

Vice President
Sri Madhukar M Shetty
Mob: 90350 56600

Vice President
Sri Ravi Shastri
Mob: 99452 30501

Vice President
Sri M. Mahesh Shetty
Mob: 94484 57367

Vice President
Sri Sathyanath Shetty
Mob: 94481 27649

Vice President
Sri H.N. Umesh
Mob: 94484 17158

Vice President
Sri G.A. Deepananda
Mob: 98456 66636

Joint Secretary
Sri H.S. Prabhakar
Mob: 99018 88548

Manager
Mob: 89706 40444

# ಪರಿವಿಡಿ


- ✦ ಅಧ್ಯಕ್ಷರ ನುಡಿ
- ✦ ಕಾರ್ಯದರ್ಶಿಯವರ ವರದಿ
- ✦ ಪರಿಶ್ರಮವನ್ನು ಬಯಸುವ ಗೌರವಾನ್ವಿತ ವೃತ್ತಿ ನಮ್ಮದು : ಮಹದೇವಯ್ಯ
- ✦ ವಿವಿಧ ಸಂಘಟನೆಗಳಲ್ಲಿ ಹೋಟೆಲ್ ಉದ್ಯಮಿಗಳು
- ✦ ಬೆಳಗಾವಿ ಹೋಟೆಲ್ ಒಡೆಯರ ಸಂಘದ ಪದಾಧಿಕಾರಿಗಳು
- ✦ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಪದಾಧಿಕಾರಿಗಳು
- ✦ ಕಾರ್ಯದರ್ಪಣ – ನಾರಾಯಣ ಗೌಡ
- ✦ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘ (ರಿ.), ತುಮಕೂರು – ನೂತನ ಪದಾಧಿಕಾರಿಗಳು
- ✦ Photo Gallary




# ಸಂಪಾದಕೀಯ.......

ಹಲವು ದಶಕಗಳ ಇತಿಹಾಸವಿರುವ ಕೆಪಿಹೆಚ್‌ಆರ್‌ಎ ವಾರ್ತೆ ಮಾಸಪತ್ರಿಕೆಯು ರಾಜ್ಯದ ಸಮಸ್ತ ಹೋಟೆಲು ಉದ್ಯಮ ಬಾಂಧವರ ನೋವು–ನಲಿವಿನ ಧ್ವನಿಯಾಗಿ ಪ್ರತಿತಿಂಗಳೂ ಬೆಳಕು ಕಾಣುತ್ತಿದೆ. ಕರ್ನಾಟಕದ ಹೋಟೆಲು ಉದ್ಯಮದಾರರ ಪ್ರತಿಧ್ವನಿಯಾಗಿರುವ ಈ ಪತ್ರಿಕೆಯು ಕಳೆದ ಕೊರೊನಾ ಕಾಲದಿಂದ ಮುದ್ರಣ ನಿಂತು ಹೋಗಿತ್ತು. ಇದೀಗ ಸಂಘಕ್ಕೂ ಹೊಸ ಆಡಳಿತ ಸಮಿತಿ ಬಂದಿದೆ. ನನಗೆ ಸಂಪಾದಕನ ಹೊಣೆಯನ್ನು ನೀಡಿದ್ದಾರೆ. ಶ್ರದ್ಧೆಯಿಂದ ಜವಾಬ್ದಾರಿಯನ್ನು ನಿರ್ವಹಿಸುವ ಪ್ರಯತ್ನ ಮಾಡುತ್ತೇನೆ. ಈ ಪತ್ರಿಕೆಯು ಮುಂದಿನ ದಿನಗಳಲ್ಲಿ ಉದ್ಯಮ ಬಂಧುಗಳಿಗೆ ಉಪಯುಕ್ತ ಕೈಪಿಡಿಯಾಗಬೇಕು, ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಮಾಹಿತಿಗಳನ್ನು ಇದು ಒಳಗೊಂಡಿರಬೇಕು ಎಂಬ ಆಶಯ ನಮ್ಮದು.

ಹೋಟೆಲು ಉದ್ಯಮ ಮತ್ತು ಪ್ರವಾಸೋದ್ಯಮಕ್ಕೆ ಸಂಬಂಧಿಸಿ ಉತ್ತಮ ಲೇಖನಗಳನ್ನು ಚಿತ್ರಮಾಹಿತಿಗಳನ್ನು, ಉದ್ಯಮದ ಪ್ರಗತಿಗೆ ಪೂರಕವಾದ ವಿಷಯಗಳನ್ನು ಸಂಘದ ಸದಸ್ಯ ಬಂಧುಗಳು ಸಂಘದ ವಿಳಾಸಕ್ಕೆ ಘನಪ್ರತಿ, ವ್ಯಾಟ್ಸಪ್ ಅಥವಾ ಮಿಂಚಂಚೆ(ಮೈಲ್) ಮೂಲಕ ಕಳುಹಿಸಿಕೊಡಬಹುದು. ಸೂಕ್ತ ಕಂಡಂತೆ ಪ್ರಕಟಿಸಲಾಗುವುದು.

email- info@ksha.co.in - whatsup- 8970640444

ಪತ್ರಿಕೆಯು ಸಂಘಕ್ಕೆ ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ಹೊರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ನಮ್ಮ ಮೇಲಿದ್ದು ಪ್ರತಿಯೊಬ್ಬ ಸದಸ್ಯರೂ ಪತ್ರಿಕೆಗೆ ತಮ್ಮ ಜಾಹಿರಾತುಗಳನ್ನು ನೀಡುವ ಮೂಲಕ ಬೆಂಬಲ ಕೊಡಬೇಕಾಗಿ ವಿನಂತಿಸುತ್ತೇವೆ. ಪತ್ರಿಕೆಯನ್ನು ಬೆಳೆಸುವ ಬಗ್ಗೆಯೂ ಸಲಹೆ ಸೂಚನೆಗಳಿಗೆ ಸ್ವಾಗತವಿದೆ.

ವೀರೇಂದ್ರ ಎನ್. ಕಾಮತ್ ಮಧುಕರ್ ಶೆಟ್ಟಿ

# ಅಧ್ಯಕ್ಷರ ನುಡಿ



ಬಿ. ಚಂದ್ರಶೇಖರ ಹೆಬ್ಬಾರ್

ಕರ್ನಾಟಕದ ಸಮಸ್ತ ಹೋಟೆಲು ಉದ್ಯಮದವರಿಗೆ ದಸರಾ ಶುಭಾಶಯಗಳು. ನಾಡದೇವಿ ಚಾಮುಂಡೇಶ್ವರಿಯು ಸರ್ವರಿಗೂ ಶುಭವನ್ನುಂಟು ಮಾಡಲಿ ಎಂದು ಆಶಿಸುತ್ತೇನೆ. ಕಳೆದ ಮೂರು ವರ್ಷಗಳಿಂದಲೂ ನಮ್ಮ ಸಂಘದ ಚಟುವಟಿಕೆಗಳು ಸ್ಥಗಿತಗೊಂಡಿದ್ದು ತಮಗೆ ತಿಳಿದೇ ಇದೆ ಅದಕ್ಕೆ ಕಾರಣಗಳೂ ತಮಗೆ ತಿಳಿಯದ ವಿಷಯವೇನಲ್ಲ. ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳುವ ಹೊಣೆ ನಮ್ಮೆಲ್ಲರದಾಗಿದೆ.

ಇದೀಗ ಹೊಸ ಕಾರ್ಯಕಾರಿ ಸಮಿತಿ ಹಾಗೂ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗುವಲ್ಲಿ ಸಂಘದ ಸರ್ವಸದಸ್ಯರು ಮತ್ತು ಎಲ್ಲ ಜಿಲ್ಲಾ ಹಾಗೂ ತಾಲ್ಲೂಕುಗಳ ಸಂಯೋಜಿತ ಸಂಘಗಳ ಪ್ರತಿನಿಧಿಗಳು ಉತ್ತಮ ರೀತಿಯ ಸಹಕಾರ ನೀಡಿದ್ದೀರಿ. ಅದಕ್ಕಾಗಿ ತಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕಳೆದ ಮೂರುವರ್ಷಗಳ ಹಿಂದೆ ನಾವು ಸರಕಾರಕ್ಕೆ ಕೊಟ್ಟ ಮನವಿಗಳ ಸ್ಥಿತಿಗತಿಯೇನು ಎಂಬುದನ್ನು ಈಗ ಮತ್ತೊಮ್ಮೆ ಪರಿಶೀಲನೆ ಮಾಡಿ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ಮುಂದಿನ ಉಪಕ್ರಮಗಳನ್ನು ನಿರ್ಣಯಿಸಬೇಕಾಗಿದೆ. ಸದ್ಯಕ್ಕೆ ಸಮ್ಮೇಳನ, ಪ್ರಶಸ್ತಿ ಸಮಾರಂಭಗಳನ್ನು ಬದಿಗಿರಿಸಿ ಹೋಟೆಲು ಉದ್ಯಮದ ಪ್ರಮುಖ ಸಮಸ್ಯೆಗಳೇನು ಮತ್ತು ಪರಿಹಾರ ಹೇಗೆ ಎಂಬುದನ್ನು ನಿಷ್ಕರ್ಷೆ ಮಾಡಿ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಏನಾಗಬೇಕು ಎಂಬ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಸಂಘಗಳು ನಮ್ಮ ಗಮನಕ್ಕೆ ತಂದು ಸಂಘವು ಕೆಲಸ ಮುಂದುವರಿಸುವಲ್ಲಿ ಪ್ರೇರಣೆ ನೀಡಬೇಕಾಗಿದೆ.

ಈ ಮಧ್ಯೆ ಚುನಾವಣೆ ನಡೆದು ನಮ್ಮ ರಾಜ್ಯದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದಿದೆ. ಮಳೆಯ ಕೊರತೆ ಕೃಷಿಯ ಮೇಲೆ ದುಷ್ಪರಿಣಾಮ ಬೀರಿದೆ. ಎಲ್ಲ ಅಗತ್ಯ ವಸ್ತುಗಳ ಬೆಲೆಗಳೂ ಗಗನಕ್ಕೇರುತ್ತಿವೆ. ಆದರೆ ನಮ್ಮ ಹೋಟೆಲು ಉದ್ಯಮದಲ್ಲಿ ತಿಂಡಿತಿನಿಸುಗಳ, ಊಟೋಪಹಾರ ಪಾನೀಯಗಳ ದರಗಳನ್ನು ಏರಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಸಾಮಗ್ರಿ, ಇಂಧನ, ವೇತನ, ಬಾಡಿಗೆ, ಪ್ರತಿಯೊಂದೂ ಕೋವಿಡ್ ಬರುವುದಕ್ಕಿಂತ ಮೊದಲು ಇದ್ದುದಕ್ಕಿಂತ ಎರಡು ಪಟ್ಟಾಗಿದೆ. ಹೋಟೆಲು ಉದ್ಯಮ ಮಾತ್ರ ಆ ಮಟ್ಟಕ್ಕೆ ಬೆಳೆದಿಲ್ಲ.

ಅದೇ ರೀತಿಯಲ್ಲಿ ದರವನ್ನು ಹೆಚ್ಚಿಸುವುದು ಸಾಧ್ಯವಾಗದೇ ಇರುವುದಕ್ಕೆ ಕಾರಣ, ನಮ್ಮ ಹೋಟೆಲುಗಳ ಮಧ್ಯೆ ಇರುವ ದರ ಪೈಪೋಟಿ. ಕರ್ನಾಟಕದ ಹೊರತಾಗಿ ಬೇರೆ ರಾಜ್ಯಗಳಲ್ಲಿ ಈ ರೀತಿಯ ದರ ಪೈಪೋಟಿ ಇಲ್ಲ. ಇಲ್ಲಿ ಆವಿಷ್ಕಾರಗಳು ಅನ್ನುತ್ತಾರೆ, ಹೈಜೀನಿಕ್ ಅನ್ನುತ್ತಾರೆ, ಗುಣಮಟ್ಟ ಅನ್ನುತ್ತಾರೆ, ಎಲ್ಲ ಹೇಳಿ ಕಡಿಮೆ ದರದಲ್ಲಿ ನೀಡುತ್ತಾರೆ.

ಎಲ್ಲ ರೀತಿಯಲ್ಲಿ ಉತ್ತಮ ಆಹಾರವನ್ನು ಕಡಿಮೆ ಬೆಲೆಯಲ್ಲಿ ನೀಡುವುದರಿಂದ ನೆರೆಹೊರೆಯ ಹೋಟೆಲುಗಳೂ ಅದೇ ದಾರಿಯನ್ನು ಹಿಡಿಯುತ್ತವೆ. ದರ ಸ್ಪರ್ಧೆಗೆ ದಾರಿಯಾಗುತ್ತದೆ. ಗುಣ ಮಟ್ಟದಲ್ಲಿ ಸ್ಪರ್ಧೆ ಇರಲಿ ಜತೆಗೆ ದರ ಏರಿಕೆಯಲ್ಲಿ ಸ್ಪರ್ಧೆ ಬರಲಿ. ನೆರೆ ಹೊರೆಯ ರಾಜ್ಯಗಳಲ್ಲಿ ಇಂತಹ ಸ್ಪರ್ಧೆಗಳಿಲ್ಲ. ಏನಿದ್ದರೂ ಉತ್ತಮ ಸೇವೆ, ಉತ್ತಮ ದರ ಅಷ್ಟೆ. ಇದನ್ನು ನಾವು ಅನುಸರಿಸಬೇಕು.

ಗ್ರಾಹಕರೇನೂ ಯಾವ ತಿನಿಸಿಗೆ ಎಷ್ಟು ದರವೆಂದು ಕೇಳಿ ಖರೀದಿಸುವುದಲ್ಲ. ತಮಗಿಷ್ಟವಾದ ತಿಂಡಿತಿನಿಸುಗಳನ್ನು ಸವಿಯಲು ಹೋಟೆಲಿಗೆ ಬರುತ್ತಾರೆ. ಬೆಲೆ ಎಷ್ಟಿದ್ದರೂ ಇಷ್ಟದ ಎದುರು ಅವೆಲ್ಲಾ ಲೆಕ್ಕಕ್ಕಿಲ್ಲ. ಅದ್ದರಿಂದ ಹೋಟೆಲು ಮಾಲೀಕರು ಉತ್ತಮ ಸೇವೆ ನೀಡುವ ಬಗ್ಗೆ ಯೋಚಿಸಬೇಕೇ ಹೊರತು ದರ ಇಳಿಸುವ ಸ್ಪರ್ಧೆ ನಡೆಸಬಾರದು.

ಕರ್ನಾಟಕದ ಹೋಟೆಲುಗಳ ಸರಿಸಮಾನವಾಗಿ ಕಡಿಮೆ ದರದಲ್ಲಿ ಅತ್ಯುತ್ತಮ ಆಹಾರ ನೀಡುವ ಹೋಟೆಲುಗಳು ವಿಶ್ವದಲ್ಲೇ ಎಲ್ಲೂ ಇಲ್ಲ ಎಂಬುದು ಅತಿಶಯೋಕ್ತಿಯಲ್ಲ.

ಇತ್ತೀಚೆಗಿನ ದಿನಗಳಲ್ಲಿ ಪರಿಣತ ಕಾರ್ಮಿಕರ

ಕೊರತೆಯೂ ನಮ್ಮ ಹೋಟೆಲುಗಳನ್ನು ಸಮಸ್ಯೆಯಾಗಿ ಕಾಡುತ್ತಿದೆ. ಆದ್ದರಿಂದ ಉತ್ತಮ ದರ ಇಟ್ಟರೆ ಮಾತ್ರ ನಾವು ಉದ್ಧಾರ ಆಗಬಹುದು, ನಾವು ಏಳಿಗೆಯಾದರೆ ಹೋಟೆಲು ಉದ್ಯಮದ ಬೆಳವಣಿಗೆಗೆ ಕೊಡುಗೆ ನೀಡಬಹುದು.

ಕಾಲಕಾಲಕ್ಕೆ ಬದಲಾಗುವ ಇಎಸ್‌ಐ, ಪಿಎಫ್ ಇತ್ಯಾದಿ ಎಲ್ಲ ನಿಯಮಗಳನ್ನೂ ಹೋಟೆಲು ಉದ್ಯಮದಾರರು ಅನುಸರಿಸುತ್ತಾರೆ. ಜಿಎಸ್‌ಟಿ ಶೇ. 5 ಇದೆ. ಅದೇ ರೀತಿ ಹೋಟೆಲ್ ಬಿಲ್ಡಿಂಗ್ ಬಾಡಿಗೆಗೆ ಕೂಡ 5%ಗೆ ತರಬೇಕು ಗ್ರಾಹಕರಿಂದ ವಸೂಲಿ ಮಾಡುತ್ತೇವಾದರೂ ಹೋಟೆಲು ಉದ್ಯಮ ಸೇವಾ ಉದ್ಯಮವಾಗಿರುವ ಕಾರಣ ಜಿಎಸ್‌ಟಿಯನ್ನು ಶೇ. ಶೂನ್ಯಗೊಳಿಸುವ ಅಗತ್ಯವಿದೆ.

ವಸತಿಗೃಹಗಲ್ಲಿ ರೂ.1000ಕ್ಕಿಂತ ಹೆಚ್ಚಿನ ಬಾಡಿಗೆಯ ದರಗಳ ಕೊಠಡಿಯ ಮೇಲಿನ ಜಿಎಸ್‌ಟಿ ಶೇ.5 ಇದ್ದದ್ದನ್ನು ಏರಿಕೆ ಮಾಡಿರುವುದು ಸರಿಯಲ್ಲ. ಅದನ್ನೂ ಇಳಿಕೆ ಮಾಡಿ ಹೋಟೆಲು ಉದ್ಯಮಕ್ಕೆ ಪ್ರೋತ್ಸಾಹ ನೀಡಬೇಕಾಗಿದೆ.

ನಗರದಲ್ಲಿ ಪಾರ್ಕಿಂಗ್ ಸಮಸ್ಯೆ ವಿಪರೀತವಾಗಿದೆ. ಸಸಿ ನೆಡುತ್ತಾ ರಸ್ತೆಗಳ ಅಗಲ ಕಿರಿದಾಗಿವೆ. ವಾಹನಗಳು ಹೆಚ್ಚುತ್ತಲೇ ಇವೆ. ಸ್ವಂತವಾಹನಗಳಲ್ಲಿ ಓಡಾಡುವವರ ಸಂಖ್ಯೆ ಹೆಚ್ಚಿರುವ ಪರಿಣಾಮ ಎಲ್ಲಿ ನೋಡಿದರೂ ಟ್ರಾಫಿಕ್ ಜಾಮ್ ಕಾಣುತ್ತಿದೆ. ಇದನ್ನು ತಪ್ಪಿಸಲು ನೊಪಾರ್ಕಿಂಗ್ ಝೋನ್ ರೂಪಿಸಲಾಗುತ್ತಿದೆ. ಹಲ ಕೆಲವು ರಸ್ತೆಗಳಲ್ಲಿ ನೋ ಪಾರ್ಕಿಂಗ್ ವಿಧಿಸುವುದರಿಂದ ಹೋಟೆಲುಗಳ ವ್ಯಾಪಾರಕ್ಕೆ ಧಕ್ಕೆಯಾಗುತ್ತಿದೆ. ನಗರದ ಅನೇಕ ಕಡೆಗಳಲ್ಲಿ ಸರಕಾರದ ಮತ್ತು ಪಾಲಿಕೆಯ ಖಾಲಿ ಸ್ಥಳಗಳು ಇವೆ. ಅಂತಹ ಸ್ಥಳಗಳಲ್ಲಿ ಪಾರ್ಕಿಂಗ ಮಾಡುವುದಕ್ಕೆ ಬಹುಮಹಡಿ ವ್ಯವಸ್ಥೆಯನ್ನು ಮಾಡಿದರೆ ಜನರು ಪಾಕಿಂಗ್ ಶುಲ್ಕ ಪಾವತಿಸಿ ವಾಹನ ನಿಲ್ಲಿಸಿ, ಹೋಟೆಲುಗಳಿಗೆ ಬರಲು, ಶಾಪಿಂಗ್ ಮಾಡಲು ಸಾಧ್ಯವಾಗುತ್ತದೆ.

ಸದ್ಯದಲ್ಲೇ ಪಾಲಿಕೆ ಮತ್ತು ದೇಶದ ಮಹಾಚುನಾವಣೆ ನಡೆಯಲಿಕ್ಕಿದೆ. ಈ ವೇಳೆ ನಮ್ಮ ಉದ್ಯಮಕ್ಕೆ ಶ್ರೇಯಸ್ಸಾಗುವಂತಹ ಸೂಕ್ತ ನಿರ್ಣಯವನ್ನು ಪ್ರತಿಯೊಬ್ಬರೂ ಮಾಡಬೇಕಾಗಿದೆ.


ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಅನೇಕ ವಿಷಯಗಳ ಚರ್ಚೆ ಮಾಡಿದ್ದೇವೆ. ಆದರೆ ಅವುಗಳನ್ನು ಜಾರಿಮಾಡಲು ಹಣಕಾಸಿನ ಅಗತ್ಯವಿದೆ. ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಹೋಟೆಲು ಉದ್ಯಮದಾರರ ಸಂಯೋಜಿತ ಸಂಘಗಳು ಹೆಚ್ಚಿನ ರೀತಿಯಲ್ಲಿ ತಮ್ಮ ನೆರವನ್ನು ಮಾತೃಸಂಘವಾದ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘಕ್ಕೆ ಒದಗಿಸುವ ಮೂಲಕ ಸಂಘವನ್ನು ಆರ್ಥಿಕವಾಗಿ ಬಲಗೊಳಿಸಲು ಸಹಕಾರ ನೀಡಬೇಕು.

ಹಿಂದೆ ಸಂಘದಿಂದ ಸಾಕಷ್ಟು ಸಮ್ಮೇಳನಗಳು ನಡೆದಿವೆ, ಸಮಾರಂಭಗಳನ್ನು ಮಾಡಿದ್ದೇವೆ. ನಾನು ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷನಾಗಿದ್ದಾಗ ಸಂಘದ ಮಾಸಿಕ ವಂತಿಗೆಯ ಸಂಗ್ರಹವನ್ನು ಒಂದು ಲಕ್ಷಕ್ಕಿಂತ ಮೇಲೆ ಏರಿಸಿದ್ದೇನೆ. ಸಂಘಕ್ಕೆ ಕೆ.ಆರ್. ರಸ್ತೆಯಲ್ಲಿ ಸ್ವಂತ ಕಾರ್ಯಾಲಯ, ಸಭಾಂಗಣ, ಹಾರೋಹಳ್ಳಿಯಲ್ಲಿ ಒಂದು ಎಕರೆ ನಿವೇಶನ, ಕಸತ್ಯಾಜ್ಯ ವಿಲೇವಾರಿಯ ಮತ್ತು ಸಂಸ್ಕರಣೆಯ ವ್ಯವಸ್ಥೆ ಇತ್ಯಾದಿಗಳನ್ನು ಮಾಡಿದ್ದೇನೆ. ಆದ್ದರಿಂದ ಈಗಲೂ ಆ ಸಂಘವು ಚೆನ್ನಾಗಿಯೇ ನಡೆಯುತ್ತಿದೆ. ಇಲ್ಲಿಯೂ ನೀವೆಲ್ಲ ಸೂಕ್ತ ರೀತಿಯಲ್ಲಿ ಸ್ಪಂದಿಸಿ ಸಹಕಾರ ನೀಡಿದರೆ ಸಂಘಕ್ಕೆ, ಉದ್ಯಮಕ್ಷೇತ್ರಕ್ಕೆ ಹೆಚ್ಚಿನ ಸೇವೆಸಲ್ಲಿಸಲು ಉತ್ಸುಕ ನಾಗಿದ್ದೇನೆ. ಕೋವಿಡ್ ಸಮಯದಲ್ಲಿಯೂ ಕೂಡ ಹೋಟೆಲ್ ಉದ್ಯಮದ ಕಾರ್ಮಿಕರಿಗೆ, ಸಾರ್ವಜನಿಕರಿಗೆ ಕೋವಿಡ್ ವ್ಯಾಕ್ಸಿನೇಷನ್ ಅನ್ನು ಸಾವಿರಾರು ಜನರಿಗೆ ನಮ್ಮ ಹೋಟೆಲ್‌ನಲ್ಲಿ ಉಚಿತವಾಗಿ ಕೊಡಿಸಿದ್ದೇನೆ.

ಸಂಘವು ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ನೀವೆಲ್ಲ ಉತ್ತಮ ಸಲಹೆ, ಸೂಚನೆ ಮತ್ತು ಅಗತ್ಯ ಆರ್ಥಿಕ ಸಹಕಾರವನ್ನು ಒದಗಿಸಿದರೆ ಈ ಸಂಘವು ರಾಷ್ಟ್ರ ಮಟ್ಟದಲ್ಲಿ ಬಲಾಢ್ಯ ಸಂಘವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಹೋಟೆಲು ಉದ್ಯಮಕ್ಕೆ ಸಂಬಂಧಿಸಿದ ಯಾವುದೇ ಕೆಲಸವೂ, ಉಪಕ್ರಮವೂ ಮತ್ತು ಹೋರಾಟವೂ ಸಂಘದ ಲಾಂಛನದ ಮತ್ತು ಸಂಘದ ಬ್ಯಾನರಿನ ಅಡಿಯಲ್ಲಿಯೇ ಆಗಬೇಕೆಂಬ ಜಾಗೃತಿ ನಮಗೆ ಇರಬೇಕು. ಹಸಿದವರಿಗೆ ಅನ್ನ ನೀಡುವ ಉದ್ಯಮ ನಮ್ಮದು, ಸಂಘಕ್ಕಾಗಿ ನಾವೆಲ್ಲರೂ ಸಂಘಟಿತರಾಗಿ ಏನು ಮಾಡಬಹುದೋ ಯೋಚಿಸಿ ಸಲಹೆ ಸಹಕಾರ ನೀಡಿದರೆ ಸಾಧನೆ ಮಾಡಲು ಸಾಧ್ಯವಿದೆ. ನಮ್ಮ ಸಂಘಕ್ಕೆ ಉತ್ಸಾಹಿ ಕಾರ್ಯದರ್ಶಿ ಯವರಿದ್ದಾರೆ. ಅವರಿಂದ ಉದ್ಯಮಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ತಾವೆಲ್ಲರೂ ಪ್ರೋತ್ಸಾಹಿಸಬೇಕು.

**–ಬಿ.ಚಂದ್ರಶೇಖರ ಹೆಬ್ಬಾರ್**


Swathi
GROUP
HOTELS | RESTAURANTS | BANQUETS
OUTDOOR CATERING | EVENT VENUES
Atithi Devo Bhava
Swathi Group of Restaurants
Swathi Caterers
www.attidehotels.com
Corporate Office

# ಕಾರ್ಯದರ್ಶಿಯವರ ವರದಿ



ಸದಸ್ಯ ಬಂಧುಗಳೇ,

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ 70ನೇ ವರ್ಷ ತುಂಬಲಿರುವ ಸುಸಮಯದಲ್ಲಿ ನನಗೆ ಗೌರವ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನಿಮ್ಮೆಲ್ಲರಿಗೂ ಹೃದಯಸ್ಪರ್ಶಿ ವಂದನೆಗಳು.

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ (ಕೆ.ಎಸ್.ಎಚ್.ಎ)ಕ್ಕೆ ಹೊಸದಾಗಿ ಲೋಗೋವೊಂದನ್ನು ಮಾಡಲಾಗಿದೆ. ಇದಕ್ಕೆ ಸಹಕರಿಸಿದಂತಹ ಶ್ರೀ ವೀರೇಂದ್ರ ಕಾಮತ್, ಶ್ರೀ ಮಧುಕರ್ ಶೆಟ್ಟಿ ಹಾಗೂ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ್ ಹೆಬ್ಬಾರ್‌ರವರಿಗೆ ಕೃತಜ್ಞತೆಗಳು.

ಕನಿಷ್ಠ ವೇತನ ಈಗಾಗಲೇ ಜಾರಿಯಲ್ಲಿದ್ದು ಅದರ ಮರುಪರಿಶೀಲನೆಯಾಗಿ, ಕನಿಷ್ಠ ವೇತನ ಹೆಚ್ಚಳವಾಗುವ ಸಾಧ್ಯತೆ ಇರುವುದರಿಂದ ಕರ್ನಾಟಕ ವಾಣಿಜ್ಯ ಮಂಡಳಿಯ ನೇತೃತ್ವದಲ್ಲಿ ಕಾನೂನು ಹೋರಾಟ ಮಾಡುವ ವಿಚಾರ ಚರ್ಚೆಯಲ್ಲಿದೆ.

ಸಂಘಕ್ಕೆ ಸದಸ್ಯರೇ ಶಕ್ತಿ. ಅದ್ದರಿಂದ ಸಂಘದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ದೃಷ್ಟಿಯಿಂದಲೂ ರಾಜ್ಯದಲ್ಲಿರುವ ಎಲ್ಲ ಹೋಟೆಲು ಉದ್ಯಮದಾರರ ಅಂಕಿಅಂಶಗಳನ್ನು ಸಂಗ್ರಹಿಸಲು ಯೋಜಿಸಲಾಗಿದ್ದು, ಇದಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಸಂಘಗಳ ಸಹಕಾರದ ಅಗತ್ಯವಿದೆ. ಹಲವಾರು ಸದಸ್ಯರ ಮೊಬೈಲ್ ಸಂಖ್ಯೆ ಹಾಗೂ ವಿಳಾಸದಲ್ಲಿ ನ್ಯೂನತೆ ಇರುವುದರಿಂದ ಎಲ್ಲಾ ಸದಸ್ಯರು ತಮ್ಮ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸಂಘದ ಮ್ಯಾನೇಜರ್‌ರವರಿಗೆ ಕಳುಹಿಸಿಕೊಡಬೇಕೆಂದು ವಿನಂತಿ.

ನೂತನ ಕಾರ್ಯಕಾರಿ ಮಂಡಳಿ ಅಸ್ತಿತ್ವಕ್ಕೆ ಬಂದ ಕೂಡಲೇ ನಾವು ಸಂಘದ ಪದಾಧಿಕಾರಿಗಳು ವಿತ್ತ ಸಚಿವರನ್ನು ಭೇಟಿ ಮಾಡಿ ಹೋಟೆಲು ಉದ್ಯಮವನ್ನು ಪ್ರೋತ್ಸಾಹಿಸುವುದಕ್ಕಾಗಿ 1000 ರೂ.ಗಿಂತ ಕಡಿಮೆ ಬಾಡಿಗೆಯ ವಸತಿಗೃಹಗಳ ಕೊಠಡಿಗಳ ಮೇಲೆ ಶೇ.12 ಇರುವ ಜಿಎಸ್‌ಟಿಯನ್ನು ಶೇ.5ಕ್ಕೆ ಇಳಿಸಬೇಕೆಂದು ಮನವಿ ಸಲ್ಲಿಸಿದ್ದೇವೆ. ನೆರೆಹೊರೆಯ ರಾಜ್ಯಗಳ ಹೋಟೆಲು ಉದ್ಯಮದಾರರ ಸಂಘಗಳಿಗೂ ಇದೇ ರೀತಿಯ ಮನವಿಗಳನ್ನು ಸರಕಾರಕ್ಕೆ ಸಲ್ಲಿಸುವಂತೆ ಕೋರಿದ್ದೇವೆ.

ಕಳೆದ ಒಂದು ವರ್ಷದಲ್ಲಿ ಎಫ್‌ಕೆಸಿಸಿಐಯಲ್ಲಿ ಟೂರಿಸಂ ಕಮಿಟಿ ಚೇರ್‌ಮನ್ ಆಗಿದ್ದವೇಳೆ ರಾಜ್ಯ ಮತ್ತು ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ಹಲವು ಮನವಿಗಳನ್ನು ಸಲ್ಲಿಸಿದ ಪರಿಣಾಮ ರಾಜ್ಯದಲ್ಲಿ ಐದು ಕ್ಲಸ್ಟರ್‌ಗಳನ್ನು ರಚಿಸಲಾಗಿದ್ದು ಹಲವು ಐತಿಹಾಸಿಕ ಕೇಂದ್ರಗಳನ್ನು ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರಿಸಿ ಅವುಗಳನ್ನು ಅಭಿವೃದ್ಧಿಪಡಿಸಲು ಖಾಸಗಿಯವರಿಗೆ ದತ್ತು ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ.

ಬಫರ್‌ಝೋನ್ ನಿಯಮಗಳಿಂದಾಗಿ ಕರಾವಳಿಯಲ್ಲಿ ಮತ್ತು ಅರಣ್ಯ ಇಲಾಖೆ ಹಗೂ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಹೋಟೆಲು ಉದ್ಯಮದ ಅಭಿವೃದ್ಧಿಗೆ ಅಡ್ಡಿಆತಂಕಗಳು ಎದುರಾಗುತ್ತಿರುವುದನ್ನು ಮನಗಂಡು ಸರಕಾರವು ಬಫರ್‌ಝೋನ್ ವ್ಯಾಪ್ತಿಯನ್ನು ಕಡಿಮೆ ಮಾಡಲು ನಿರ್ಣಯಿಸಿರುವುದು ಉಲ್ಲೇಖನೀಯ.

ಉಳಿಕೆ ಭೂಮಿಯಲ್ಲಿ ಶಾಲೆ–ಕಾಲೇಜು ಮತ್ತು ಆಸ್ಪತ್ರೆಗಳನ್ನು ನಿರ್ಮಿಸಲು ಅವಕಾಶ ನೀಡಲಾಗಿದ್ದು ಪೂರಕವಾಗಿ ಅಂತಹ ಸ್ಥಳಗಳಲ್ಲಿ ಹೋಟೆಲುಗಳ ಸ್ಥಾಪನೆಗೂ ಅನುಮತಿ ನೀಡಿದಲ್ಲಿ ಉದ್ಯೋಗಾವಕಾಶ ಮತ್ತು ಉದ್ಯಮದ ಅಭಿವೃದ್ಧಿ ಸಾಧ್ಯವೆಂಬುದನ್ನು ಸರಕಾರಕ್ಕೆ ಮನದಟ್ಟು ಮಾಡಲಾಗಿದೆ.

ಸಂಘದ ಬೆಳವಣಿಗೆ ಮತ್ತು ಹೋಟೆಲು ಉದ್ಯಮದ ಹಿತರಕ್ಷಣೆಯ ಧ್ಯೇಯದಿಂದ ನಾವು ಕೈಗೊಳ್ಳುವ ಎಲ್ಲ ಕೆಲಸಕಾರ್ಯಗಳಿಗೂ ಸದಸ್ಯಬಂಧುಗಳು ಮತ್ತು ಸಂಯೋಜಿತ ಸಂಘಸಂಸ್ಥೆಗಳು ಸಹಕಾರ ನೀಡಬೇಕೆಂದು ಕೋರುತ್ತಿದ್ದೇನೆ.

ವಿಶ್ವ ಪ್ರವಾಸೋದ್ಯಮ ದಿನದಂದು ರೇಡಿಯೋ ಸಿಟಿ 92.7 ಬಿಗ್ ಎಫ್‌ಎಂ ಪ್ರಾಯೋಜಕರಾದ ಶ್ರೀಯುತರಾದ ಕೃಷ್ಣಂ ರಾಜು, ರಾಮಮೂರ್ತಿ, ಡಾ. ರವಿಚಂದ್ರನ್, ಸಂತೋಷ್ ಶೆಟ್ಟಿ, ಪ್ರಭಾಕರ್ ಶೆಟ್ಟಿ ಮತ್ತು ರಾಘವೇಂದ್ರ–ರಾಮೇಶ್ವರ ಕೆಫೆ ಹಾಗೂ ಅಡಿಯಾರ್ ಆನಂದ ಭವನ ಸಮೂಹದವರು ನೀಡಿದ ಸಹಕಾರಕ್ಕೆ ನಮ್ಮ ಕೃತಜ್ಞತೆಗಳು.

ಸಂಘಸಂಸ್ಥೆಯಲ್ಲಿ ದೀರ್ಘವಾದ ಅವಧಿಯ ಅಪಾರವಾದ ಅನುಭವವಿರುವ ಶ್ರೀಯುತ ಬಿ. ಚಂದ್ರಶೇಖರ್ ಹೆಬ್ಬಾರ್‌ರವರ ಮುಂದಾಳತ್ವದಲ್ಲಿ ಸಂಘಕ್ಕೆ ಸಾಧ್ಯವಾದಷ್ಟು ಉತ್ತಮ ಕೆಲಸವನ್ನು ಭರವಸೆಯೊಂದಿಗೆ ನಿಮ್ಮ ವಿಶ್ವಾಸಿ,

**ಜಿ.ಕೆ.ಶೆಟ್ಟಿ,** ಗೌರವ ಕಾರ್ಯದರ್ಶಿ

ಮಾಜಿ ಅಧ್ಯಕ್ಷರಿಂದ

# ಪರಿಶ್ರಮವನ್ನು ಬಯಸುವ ಗೌರವಾನ್ವಿತ ವೃತ್ತಿ ನಮ್ಮದು : ಮಹದೇವಯ್ಯ



ಹೋಟೆಲು ಉದ್ಯಮವು ಪರಿಶ್ರಮವನ್ನು ಬೇಡುವ ಗೌರವಾನ್ವಿತ ವೃತ್ತಿ, ಬಡತನದ ಜೀವನದಲ್ಲಿ ಹತ್ತು ರುಪಾಯಿ ಬಂಡವಾಳದಲ್ಲಿ ದುಡಿದು ಹೋಟೆಲು ಉದ್ಯಮ ಕಟ್ಟಿ ಬೆಳೆಸಿದ ಜೀವನ ಕಂಡವರು ನಾವು. ನಮ್ಮ ಉದ್ಯಮ ಮತ್ತು ನಮ್ಮ ಸಂಘಟನೆ ನಮಗೆ ರಾಜ್ಯದಾದ್ಯಂತ ಬಂಧುಮಿತ್ರರನ್ನು ಒದಗಿಸಿದೆ. ಸಮಾಜದಲ್ಲಿ ಗೌರವಾನ್ವಿತ ಸ್ಥಾನಮಾನಗಳನ್ನು ನೀಡಿದೆ. ಈ ಉದ್ಯಮದಲ್ಲಿ ಕಳೆದ ಆರೇಳು ದಶಕಗಳಿಂದ ಒಂದೊಂದೇ ಹೆಜ್ಜೆಯನ್ನಿಡುತ್ತ ನಡೆದು ಬಂದಿದ್ದೇವೆ. ಈಗಿನ ಪೀಳಿಗೆಗೆ ಪರಿಶ್ರಮದಲ್ಲಿ ಆಸಕ್ತಿಯಿಲ್ಲ. ಹಾಗಾಗಿ ಹೋಟೆಲು ಉದ್ಯಮದ ಸಮಸ್ಯೆಗಳೇ ಭೂತಾಕಾರವಾಗಿ ಕಾಣುತ್ತವೆ. ಸಮಸ್ಯೆಗಳಿಲ್ಲದೇ ಹೋಟೆಲು ಉದ್ಯಮವಿಲ್ಲ. ಪರಿಹಾರಗಳನ್ನು ರೂಪಿಸುತ್ತಾ ಉದ್ಯಮದಲ್ಲಿ ಪ್ರಗತಿ ಕಾಣುವುದು ಯಶಸ್ಸಿನ ದಾರಿಯಾಗಿದೆ ಎನ್ನುತ್ತಾರೆ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಸಿ.ವಿ.ಮಹದೇವಯ್ಯನವರು.

ಕೆಪಿಹೆಚ್‌ಅರ್‌ಎ ವಾರ್ತೆಯು ಅವರನ್ನು ಇತ್ತೀಚೆಗೆ ಔಪಚಾರಿಕವಾಗಿ ಮಾತನಾಡಿಸಿದಾಗ ಹೋಟೆಲು ಉದ್ಯಮ ಬೆಳೆದು ಬಂದ ಬಗೆ ಮತ್ತು ಉದ್ಯಮದೊಳಗಿನ ಏಳುಬೀಳುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು.


ಹತ್ತಾರು ಇಲಾಖೆಗಳ ನಿಯಮಗಳಿಗೊಳಪಟ್ಟ ಉದ್ಯಮ ನಮ್ಮದು. ಅಂದಮೇಲೆ ಕಾನೂನು ನಿಯಮಗಳ ನಿಯಂತ್ರಣ ಇದ್ದೇ ಇರುತ್ತದೆ. ಜೊತೆಗೆ ಕಾರ್ಮಿಕರನ್ನೇ ಅವಲಂಬಿಸಿ ನಡೆಸುವ ಹೋಟೆಲು ಉದ್ಯಮದಲ್ಲಿ ಯಾವುದೇ ವಿಭಾಗದಲ್ಲಿ ಸಿಬ್ಬಂದಿಗಳು ಗೈರಾದರೂ ಕಾರ್ಯಸರಪಳಿ ತುಂಡರಿಸಿದಂತಾಗುತ್ತದೆ. ಅಡುಗೆಯವನು, ಸಪ್ಲಾಯರ್, ಕ್ಲೀನರ್ ಹೀಗೆ ಪ್ರತಿಯೊಬ್ಬನೂ ಈ ಉದ್ಯಮದಲ್ಲಿ ಅತ್ಯಗತ್ಯ ಸಿಬ್ಬಂದಿಯೇ. ಶುಚಿ, ರುಚಿ ಮತ್ತು ಬಿಸಿ ಈ ಮೂರು ಹೋಟೆಲುಗಳಲ್ಲಿ ಪ್ರಮುಖ ಅಂಶಗಳು. ಗ್ರಾಹಕರ ಆದೇಶವನ್ನು ಪಾಲಿಸಿ ತಕ್ಷಣವೇ ತಯಾರಿಸಿ ಗುಣಮಟ್ಟದ ಆಹಾರವನ್ನು ಶುಚಿರುಚಿಯಾಗಿ ಒದಗಿಸಿದಲ್ಲಿ ವ್ಯಾಪಾರ ಗೆದ್ದಂತೆಯೇ ಎನ್ನುತ್ತಾರೆ ಅವರು.

ಬೆಂಗಳೂರು, ತುಮಕೂರು ಸೇರಿದಂತೆ ರಾಜ್ಯದ ವಿವಿದೆಡೆಗಳಲ್ಲಿ ಅನೇಕ ಹಳೆಯ ಹೋಟೆಲುಗಳು ಇಂದಿಗೂ ತಮ್ಮ ಸೇವಾ ಶ್ರೇಷ್ಠತೆಯನ್ನು, ಗ್ರಾಹಕರ ಪ್ರೀತಿಯನ್ನು, ಶುಚಿರುಚಿಯನ್ನು ಜನಪ್ರಿಯತೆ ಯನ್ನು ಉಳಿಸಿಕೊಂಡು ಬಂದಿವೆ. ಹಾಗೆಯೇ ಅನೇಕ ಹೊಸ ಲಕ್ಷಾಂತರ, ಕೋಟ್ಯಂತರ ಬಂಡವಾಳ ಹೂಡಿ ಸ್ಥಾಪಿಸಿದ ಹೋಟೆಲುಗಳೂ ವ್ಯಾಪಾರ ಮಾಡಲಾಗದೆ ಮುಚ್ಚಿಹೋಗಿವೆ. ಹೆದ್ದಾರಿಗಳಲ್ಲಿ ದೊಡ್ಡಮಟ್ಟದಲ್ಲಿ ವ್ಯಾಪಾರ ಮಾಡುವ ದೃಷ್ಟಿಯಿಂದ ಪ್ರಾರಂಭವಾದ ಹೋಟೆಲುಗಳೂ ಸೋತು, ಸಾಲದ ಕಂತು ಕಟ್ಟಲಾಗದೆ ಬೇರೆಯವರಿಗೆ ಬಾಡಿಗೆಗೆ, ಲೀಸಿಗೆ, ಮಾರಾಟಕ್ಕೆ ಇಟ್ಟದ್ದೂ ಇದೆ. ಅದೇನೂ ಇಲ್ಲದೆ ನಗರಗಳಲ್ಲಿ ಸಣ್ಣಮಟ್ಟದಲ್ಲಿ ಪ್ರಾರಂಭವಾಗಿ ಜನರ ನಿರೀಕ್ಷೆಯ ಸೇವೆ ನೀಡಿ ಜನಮೆಚ್ಚುಗೆ ಗಳಿಸಿದವರೂ ಇದ್ದಾರೆ ಎಂದವರು ತಮ್ಮ ನೋಟವನ್ನು ತೆರೆದಿಟ್ಟರು.


ಸಮಸ್ಯೆಗಳಿಲ್ಲದೇ ಜೀವನವೇ ಇಲ್ಲ. ಹೋಟೆಲು ಉದ್ಯಮ ಅದಕ್ಕಿಂತ ಹೊರತಲ್ಲ. ಸಣ್ಣ ಸಮಸ್ಯೆಗಳನ್ನು ನಾವೇ ನಮ್ಮ ಅನುಭವದ ನೆಲೆಯಲ್ಲಿ ಪರಿಹರಿಸಿಕೊಳ್ಳಬಹುದು. ಆಡಳಿತಾತ್ಮಕ ಸಮಸ್ಯೆಗಳಾದರೆ, ಕಾನೂನು ಸಂಬಂಧಿತ ವಿಚಾರಗಳಾದರೆ ಅವು ಎಲ್ಲ ಹೋಟೆಲುಗಳಿಗೂ ಸಂಬಂಧಿಸುವ ಕಾರಣ ಸಂಘದ ಮೂಲಕ ಪರಿಹರಿಸಿಕೊಳ್ಳಬಹುದು. ಹೋಟೆಲು ಉದ್ಯಮದಾರರನ್ನು ಒಂದೇ ವೇದಿಕೆಯಡಿ ತರುವ ವ್ಯವಸ್ಥೆಯೇ ಸಂಘ. ರಾಜ್ಯ ಹೋಟೆಲುಗಳ ಸಂಘಕ್ಕೆ ರಾಜ್ಯವ್ಯಾಪಿ ಹೆಸರು ಬಂದದ್ದು ಎಸ್.ಎನ್.ಎಸ್. ರಾಯರ ಕಾಲದಲ್ಲಿ. ಆನಂತರ ಅನೇಕ ಹಿರಿಯ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಬಹಳಷ್ಟು ಕೊಡುಗೆ ನೀಡಿದ್ದಾರೆ. ನಾನು ಅಧ್ಯಕ್ಷನಾಗಿದ್ದಾಗಲೂ ಈ ಹಿರಿಯ ಉದ್ಯಮದಾರರು ಮತ್ತು ಇತರ ಮಿತ್ರರ ಸಹಯೋಗ, ಸಹಕಾರಗಳೊಂದಿಗೆ ರಾಜ್ಯವ್ಯಾಪಿ ಸಂಘದ ಕೆಲಸಗಳಿಗಾಗಿ ಪ್ರವಾಸ ಮಾಡಿದ್ದೇವೆ. ನಮ್ಮ ತುಮಕೂರಿನಲ್ಲಿ ಒಮ್ಮೆ ಸಂಘದ ರಾಜ್ಯಮಟ್ಟದ ಸಮಾವೇಶ ನಡೆದಾಗ ಸಂತೃಪ್ತಿ ಎಂಬ ಸ್ಮರಣ ಸಂಚಿಕೆಯನ್ನು ಹೊರತಂದಿದ್ದು, ಇದರಲ್ಲಿ ವಿವಿಧ ಜಿಲ್ಲೆಗಳಲ್ಲಿ ಹೋಟೆಲು ಉದ್ಯಮದಲ್ಲೂ ಮತ್ತುಇತರ ಕ್ಷೇತ್ರಗಳಲ್ಲೂ ಸಕ್ರಿಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವ ಅನೇಕ ಮಹನೀಯರ ಬಗ್ಗೆ ಲೇಖನಗಳನ್ನು ಪ್ರಕಟಿಸಲಾಗಿತ್ತು. ಹೋಟೆಲು ಉದ್ಯಮದಾರರಿಗೆ ಪ್ರತಿನಿತ್ಯ ಸಾರ್ವಜನಿಕರ ನೇರಸಂಪರ್ಕ ದೊರೆಯುವುದರಿಂದ ಉದ್ಯಮಿಗಳು ಇತರ ಸಮಾಜಿಕ ಕ್ಷೇತ್ರಗಳಲ್ಲೂ ಆಸಕ್ತಿ ವಹಿಸಿ ಸೇವೆ ಸಲ್ಲಿಸುತ್ತಿರುವುದು ಉಲ್ಲೇಖನೀಯ ಸಂಗತಿ ಎಂದವರು ಹೇಳಿದರು.

ಯುವ ಪೀಳಿಗೆಯವರು ಹೆಚ್ಚಿನ ಪರಿಶ್ರಮದ ಕಡೆಗಾಗಲೀ, ಸಂಘಟನೆಯ ಕೆಲಸಗಳ ಕಡೆಗಾಗಲೀ ಆಸಕ್ತಿ ವಹಿಸುತ್ತಿಲ್ಲ. ಬೆಳಿಗ್ಗೆ 5 ಗಂಟೆಯಿಂದ ನಡುರಾತ್ರಿ 12 ಗಂಟೆಯ ವರೆಗೂ ಶ್ರಮ ಬೇಡುವ ಈ ವೃತ್ತಿ ಕೆಲವೊಮ್ಮೆ ಒತ್ತಡದ ಕಾರಣ ನಿದ್ದೆಗೂ ಅವಕಾಶ ಕೊಡುವುದಿಲ್ಲ. ಆದ್ದರಿಂದ ಹೋಟೆಲು ಉದ್ಯಮಿಗಳ ಮುಂದಿನ ಪೀಳಿಗೆಯವರು ಈ ಉದ್ಯಮದಿಂದ ವಿಮುಖರಾಗುತ್ತಿದ್ದಾರೆ. ಹಿರಿಯರು ಕಟ್ಟಿ ಬೆಳೆಸಿದ ಹೋಟೆಲು ಉದ್ಯಮ ಸಂಸ್ಥೆಯನ್ನು ಪ್ರೀತ್ಯಾದರಗಳಿಂದ ಉಳಿಸಿ ಬೆಳೆಸುವ ಯೋಚನೆಯನ್ನು ಯುವಪೀಳಿಗೆ ಮಾಡಬೇಕಿದೆ ಎನ್ನುತ್ತಾರೆ ಮಹದೇವಯ್ಯನವರು.

# ವಿವಿಧ ಸಂಘಟನೆಗಳಲ್ಲಿ ಹೋಟೆಲ್ ಉದ್ಯಮಿಗಳು



**ಶ್ರೀ ಕೆ. ಶ್ಯಾಮ ರಾಜು**
ಅಧ್ಯಕ್ಷರು
ಕರ್ನಾಟಕ ಟೂರಿಸಮ್ ಸೊಸೈಟಿ



**ಶ್ರೀ ಪ್ರದೀಪ್ ಶೆಟ್ಟಿ**
ಅಧ್ಯಕ್ಷರು
ಎಫ್‌ಹೆಚ್‌ಆರ್‌ಎಐ



**ಶ್ರೀ ಜಿ.ಕೆ.ಶೆಟ್ಟಿ**
ಗೌರವ ಖಜಾಂಚಿ
ಕರ್ನಾಟಕ ಟೂರಿಸಮ್ ಸೊಸೈಟಿ



**ಶ್ರೀ ಪಿ.ಸಿ.ರಾವ್**
ನಿರ್ದೇಶಕರು, ಎಫ್‌ಕೆಸಿಸಿಐ



**ಶ್ರೀ ವೀರೇಂದ್ರ ಎನ್. ಕಾಮತ್**
ನಿರ್ದೇಶಕರು, ಎಫ್‌ಕೆಸಿಸಿಐ



**ಶ್ರೀ ಮಹೇಶ್ ಶೆಟ್ಟಿ**
ಅಧ್ಯಕ್ಷರು
ವಾಲಿಬಾಲ್ ಅಸೋಸಿಯೇಷನ್ಸ್

# ಬೆಳಗಾವಿ ಹೋಟೆಲ್ ಒಡೆಯರ ಸಂಘದ ಪದಾಧಿಕಾರಿಗಳು



**ಶ್ರೀ ಅಜಯ್ ಬಿ. ಪೈ,**
ಅಧ್ಯಕ್ಷರು



**ಶ್ರೀ ತಾರಾನಾಥ್ ಶೆಟ್ಟಿ,**
ಉಪಾಧ್ಯಕ್ಷರು



**ಶ್ರೀ ಗೌಡೇಶ ಪಾಟೀಲ್**
ಕಾರ್ಯದರ್ಶಿ



**ಶ್ರೀ ಸುನಿಲ್ ಶಾನುಭಾಗ್**
ಖಜಾಂಚಿ


Relax...
Refresh...
Restart...
Nandhana Hotels are amongst one of the most well designed and maintained creation of Nandhana hospitality sector. With ample amenities and facilities at every corner of our hotels, we have successfully distinguished and acknowledged of our class in the Hotel Industry on an international level.
Hotel nandhana GRAND
KORAMANGALA
Hotel nandhana HOMETEL
INDIRANAGAR
nandhana REGENT
KORAMANGALA
nandhana COMFORTS
MARATHAHALLI
nandhana VISTA
KAMMANAHALLI
nandhana HOTELS
Defining Hospitality
No. 52, 5th Cross, 6th Block, 80ft Road,
Koramangala, Bangalore - 560 095
Ph: +91-80-41858299, 9980029797
E: reservations@nandhanagrandhotels.co.in
www.nandhanahotels.com

# ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಪದಾಧಿಕಾರಿಗಳು



**B. Chandrashekar Hebbar**
President
Anna Kuteera, Bangalore
M : 98451 17351



**G K Shetty**
Hon. Secretary
Swathi Group of Hotels, Bagalore
M : 9800 00060



**M V Raghavendra Rao**
Treasurer
Kadamba Group of Hotels
M : 98800 93264



**Mahesh Shetty**
Vice President
Dharawad Residency,
Dharawad
M : 94484 57367



**H N Umesh**
Vice President
Hotel Madhura Sagara Tq
M : 94484 17158



**Ravi Shastri**
Vice President
Shastri Paradise, Mysore
M : 99452 30501



**Madhukar Shetty**
Vice President
Swathi Group, Bangalore
M: 90350 56600



**G A Deepananda**
Vice President
Hotel Upadhya Chitradurga
M : 98456 66636



**H S Prabhakar**
Joint Secretary
Bangalore
M : 99018 88548



**Satyanath Shetty**
Vice President
Hotel Kamal, Gulbarga
M: 94481 27649

**ನೂತನ ಸದಸ್ಯರು :** ಶ್ರೀಮತಿ ಲತಾ ಸುಧಾಕರ್, ಬೆಂಗಳೂರು; ಶ್ರೀ ನಸೀರ್ ಅಹಮದ್, ಮಡಿಕೇರಿ

Estd : 1954 Reg.No. : 983/87-55

# ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ (ರಿ.)
# Karnataka State Hotels Association (R)

No. 1, KSHA Golden Jubilee Bhavan, 3rd Floor, 2nd Main
Seshadripuram, Bengaluru - 560 020. India
**Phone:** 080- 2356 5574, **E-mail:** info@ksha.co.in, **Website:** www.ksha.co.in

| B. Chandrashekar Hebbar | G K Shetty | Raghavendra Rao M.V | Mudhukar Shetty | P.C. Rao |
|---|---|---|---|---|
| President | Hon. Secretary | Treasurer | Vice President | President, Bbha |
| 98451 12351 | 99800 00060 | 98800 93264 | 90350 56600 | 98444 94630 |

## ಹೋಟೆಲ್ ಉದ್ಯಮದ ಮಾಹಿತಿ

| | |
|---|---|
| 1. ಸಂಸ್ಥೆಯ ಹೆಸರು<br>NAME OF THE HOTEL | |
| 2. ಮಾಲೀಕರ ಹೆಸರು<br>OWNER / DIRECTOR / PARTNER NAME | |
| 3. ಸಂಸ್ಥೆಯ ವಿಳಾಸ<br>HOTEL ADDRESS | |
| 4.ಕಾಂಟಾಕ್ಟ್ ನಂಬರ್<br>CONTACT NO. | |
| 5. ಇಮೇಲ್ ಐಡಿ<br>E-MAIL ADDRESS | |
| 6. GST NO. | |
| 7. GST TURNOVER | |
| 8. TRADE LICENCE NO.<br>(ಪರವಾನಿಗಿ ನಂಬರ್) | |
| 9. NO. OF EMPLOYEES<br>ಕಾರ್ಮಿಕರ ಸಂಖ್ಯೆ) | |

OWNER / MANAGER
ಮಾಲೀಕರ / ಮ್ಯಾನೇಜರ್ ಸಹಿ

**Subrahmanya Thantri**
Chairman, Membership Committee

# ಕಾರ್ಯದರ್ಪಣ

## ಹೋಟೆಲು ಉದ್ಯಮಕ್ಕೆ ಪೂರಕ ಪ್ರವಾಸೋದ್ಯಮ: ನಾರಾಯಣ ಗೌಡ



ನಾರಾಯಣ ಗೌಡ
ಮೈಸೂರು ಹೋಟೆಲುಗಳ ಸಂಘದ ಅಧ್ಯಕ್ಷ

**ಮೈಸೂರು:** ಹೋಟೆಲು ಉದ್ಯಮದ ಬೆಳವಣಿಗೆಯಲ್ಲಿ ಪ್ರವಾಸೋದ್ಯಮದ ಕೊಡುಗೆ ಮಹತ್ತರವಾದದ್ದು ಎಂದು ಮೈಸೂರು ಹೋಟೆಲುಗಳ ಸಂಘದ ಅಧ್ಯಕ್ಷ ಶ್ರೀ ನಾರಾಯಣ ಗೌಡರು ಅಭಿಪ್ರಾಯಪಟ್ಟಿದ್ದಾರೆ.

ಪ್ರವಾಸೋದ್ಯಮ ಪ್ರಗತಿಯಾದಂತೆ ಹೋಟೆಲು ಉದ್ಯಮವು ಬೆಳೆಯುತ್ತದೆ ಎಂದಿರುವ ಅವರು ಈ ಬಾರಿ ಮೈಸೂರಿನಲ್ಲಿ ಪ್ರವಾಸೋದ್ಯಮ ದಿನಾಚರಣೆಯಂದು ಮೆರವಣಿಗೆ ನಡೆಸಿ ವಿಶಿಷ್ಟವಾಗಿ ಆಚರಿಸುವ ಮೂಲಕ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಕೆ.ರೂಪಾ ಅವರು ನಮ್ಮ ಉದ್ಯಮಕ್ಕೆ ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ಅವರು ತಿಳಿಸಿದರು.

ಪ್ರವಾಸೋದ್ಯಮ ದಿನಾಚರಣೆಯಲ್ಲಿ ಹೋಟೆಲು ಮಾಲೀಕರ ಸಂಘ ಮತ್ತು ಪ್ರವಾಸೀ ವಾಹನ ಮಾಲೀಕರ ಸಂಘಗಳೂ ಸಕ್ರಿಯವಾಗಿ ಕೈಜೋಡಿಸಿವೆ ಎಂದವರು ಹೇಳಿದರು.

ಪಾರಂಪರಿಕ ಸ್ಮಾರಕಗಳ ಪಟ್ಟಿಗೆ ಮೈಸೂರು ಜಿಲ್ಲೆಯ ಸೋಮನಾಥಪುರವೂ ಸೇರಿದಂತೆ ರಾಜ್ಯದ ಬೇಲೂರು ಹಳೇಬೀಡುಗಳು ಸೇರ್ಪಡೆಯಾಗಿರುವ ಸಂದರ್ಭದಲ್ಲಿ ಪ್ರವಸೋದ್ಯಮ ದಿನಾಚರಣೆಗೆ ಹೊಸರೂಪ ನೀಡಿರುವುದು ಉಲ್ಲೇಖನೀಯ ಎಂದು ಅವರು ಹೇಳಿದರು.

ಎರಡು ತಿಂಗಳ ಹಿಂದೆ ಈ ಬಾರಿ ಅದ್ದೂರಿ ದಸರಾ ಆಚರಿಸುವುದಾಗಿ ಪ್ರಕಟಿಸಿದ ಸರಕಾರ ಮಳೆ ಕಡಿಮೆಯಾಗಿ ಬರ ಘೋಷಣೆಯಾದ ಕಾರಣ ಸರಳ ದಸರಾ ಆಚರಿಸಲು ನಿರ್ಧರಿಸಿತು. ಆಗ ನಮ್ಮ ಸಂಘವು ಅದ್ದೂರಿ ದಸರಾ, ಸರಳ ದಸರಾ ಎಂದೆಲ್ಲ ಉಲ್ಲೇಖಿಸದೆ ಸಾಂಪ್ರದಾಯಿಕ ದಸರಾ ಆಚರಿಸುವ ಬಗ್ಗೆ ಪ್ರಕಟಿಸಿ ಎಂದು ಸಲಹೆ ನೀಡಿದ ಬಳಿಕ ಸಾಂಪ್ರದಾಯಿಕ ದಸರಾ ಆಚರಿಸುವ ಘೋಷಣೆ ಮಾಡಿತು. ಮೈಸೂರಿನ ಸುತ್ತಮುತ್ತ ಇರುವ ರೈತಾಪಿ ಜನರಾಗಲೀ, ಪಕ್ಕದ ಜಿಲ್ಲೆಗಳಿಂದ, ರಾಜ್ಯಗಳಿಂದ ಬರುವ ಯಾತ್ರಿಕರು, ಪ್ರವಾಸಿಗರಾಗಲೀ ನಾಡದೇವಿ ಶ್ರೀ ಚಾಮುಂಡೇಶ್ವರಿ ಯನ್ನು ಆನೆಯ ಮೇಲಿನ ಅಂಬಾರಿಯಲ್ಲಿ ನೋಡಿ ಧನ್ಯತೆಯನ್ನು ಪಡೆಯುವುದಕ್ಕಾಗಿ ಬರುತ್ತಾರೆ. ಹೊರತು ಈ ಅದ್ದೂರಿ ಸರಳ ಇತ್ಯಾದಿಗಳೆಲ್ಲ ಸರಕಾರದ ಅನುಕೂಲಕ್ಕೆ ಸಂಬಂಧಿಸಿದ ಸಂಗತಿ ಎಂದು ಅವರು ಅಭಿಪ್ರಾಯ ಪಟ್ಟರು.

ಮೈಸೂರಿನಲ್ಲಿ ನಡೆಯುವ ಎಲ್ಲ ಧಾರ್ಮಿಕ ಮತ್ತು ರಾಷ್ಟ್ರೀಯ ಹಬ್ಬಗಳಲ್ಲಿ ಮೈಸೂರು ಹೋಟೆಲುಗಳ ಸಂಘವು ಮತ್ತು ಇಲ್ಲಿನ ಹೋಟೆಲು ಮಾಲೀಕರು ಅತ್ಯಂತ ಸಕ್ರಿಯವಾಗಿ



ಪಾಲುಗೊಳ್ಳುತ್ತಾರೆ. 2010ನೇ ಇಸವಿಯಲ್ಲಿ ಮೈಸೂರಿನಲ್ಲಿ ರಾಜ್ಯ ಮಟ್ಟದ ಹೋಟೆಲು ಉದ್ಯಮದಾರರ ಸಮ್ಮೇಳನವನ್ನು ನಡೆಸಲಾಗಿದೆ. 2019ರಲ್ಲಿ ಆತಿಥ್ಯರತ್ನ ಪ್ರಶಸ್ತಿ ಸಮಾರಂಭವನ್ನು ಮೈಸೂರು ಹೋಟೆಲು ಸಂಘವು ಪ್ರಾಯೋಜಿಸಿತ್ತು. ದಿನಂಪ್ರತಿ ಎಂಬಂತೆ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಸಂಘದ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಮಾಧ್ಯಮಗಳಲ್ಲಿ ಸಂಘದ ಕ್ರಿಯಾಶೀಲತೆ ಸುದ್ದಿಯಾಗುತ್ತಲೇ ಇರುತ್ತದೆ ಎಂಬುದು ಉಲ್ಲೇಖನೀಯ ಎಂದವರು ತಿಳಿಸಿದರು.

ಜಿಲ್ಲಾ ಮಟ್ಟದಲ್ಲಿ ಮೈಸೂರು ಹೋಟೆಲು ಮಾಲೀಕರ ಸಂಘ ಮತ್ತು ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘಗಳು ಹೋಟೆಲು ಉದ್ಯಮರಂಗದ ಬೆನ್ನೆಲುಬಾಗಿ ಕೆಲಸ ಮಾಡುತ್ತಿದೆ. ಕೋವಿಡ್ ಸಂದರ್ಭದಲ್ಲಿ ಸ್ವಲ್ಪಕಾಲ ಸ್ಥಗಿತಗೊಂಡಿದ್ದ ರಾಜ್ಯ ಸಂಘದ ಚಟುವಟಿಕೆಗಳು ಈಗ ಪುನಃ ಪ್ರಾರಂಭಗೊಂಡಿರುವುದು ಸಂತೋಷದ ವಿಷಯ. ರಾಜ್ಯ ಸಂಘವು ಬಲಿಷ್ಠವಾಗಿದ್ದರೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಂಘಗಳಿಗೆ ಮಾರ್ಗದರ್ಶನ ಮಾಡಬಹುದಾಗಿದೆ. ರಾಜ್ಯ ಸಂಘವು ಹೆಚ್ಚಿನ ಪ್ರಗತಿ ಸಾಧಿಸಿ ನಾಡಿನ ಹೋಟೆಲು ಉದ್ಯಮದಾರರಿಗೆ ಉತ್ತಮ ಸೇವೆ ಸಲ್ಲಿಸಲಿ ಎಂದು ನಾರಾಯಣ ಗೌಡರು ಆಶಿಸಿದರು.

# ಸರ್ಕಾರಿ ಮತ್ತು ಕಾನೂನು ಸುತ್ತೋಲೆಗಳು

ಕರ್ನಾಟಕ ರಾಜ್ಯಪತ್ರ

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೨೪, ಮಾರ್ಚ್, ೨೦೨೩ (ಚೈತ್ರ, ೦೩, ಶಕವರ್ಷ, ೧೯೪೫)<br>BENGALURU, FRIDAY, 24, MARCH, 2023 (CHAITHRA , 03, SHAKAVARSHA, 1945) | ನಂ. ೧೩೩<br>No. 133 |
|---|---|---|

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 09 SHASANA 2023, BENGALURU, DATED:24.03.2023**

The Karnataka Fire Force (Amendment) Ordinance, 2023 ಇದಕ್ಕೆ 2023 ರ ಮಾರ್ಚ್ ತಿಂಗಳ 24ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2023 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 01 ಎಂಬುದಾಗಿ ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**Explanation:**"A high rise building" means a building of 21 meters or above in height irrespective of its occupancy as defined in the National Building Code 2016."

**THAAWARCHAND GEHLOT**
**GOVERNOR OF KARNATAKA**
By order and in the name of the
Governor of Karnataka

**G. SRIDHAR**
Secretary to Government
Department of Parliamentary
Affairs and Legislation

## ORDER

1. Complaint is dismissed. No order as to cost.

2. Applications pending, if any, stand disposed of in terms of the aforesaid judgment.

3. Supply free copy of this order to both the parties and return extra copies of the pleading and evidence to the parties.

(Dictated to the stenographer and transcribed by him and typed by him and corrected and then pronounced in the open Commission on **06th day of October, 2023)**

06/10/2023.
(Rekha Sayannvar)
MEMBER

06/10/23
(SHIVARAMA, K)
PRESIDENT

# ಭಾವಪೂರ್ಣ ಶ್ರದ್ಧಾಂಜಲಿ



**ಆನಂದರಾಮ ಉಳ್ಳೂರು**
ಚಿತ್ರದುರ್ಗ



**ಶೇಖರ್ ಎಂ. ಶೆಟ್ಟಿ**
ಬೆಂಗಳೂರು



**ಚನ್ನಕೇಶವ ಉಡುಪ**
ಬೆಂಗಳೂರು

**ಮೃತರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಮತ್ತು ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸಿ ಕೆಪಿಹೆಚ್ಆರ್ಎ ಶ್ರದ್ಧಾಂಜಲಿ ಸಲ್ಲಿಸುತ್ತದೆ.**

## ಆಹಾರ ತಜ್ಞ ಕೆ.ಸಿ.ರಘು ನಿಧನ



ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಖ್ಯಾತ ಆಹಾರ ತಜ್ಞ, ಉದ್ಯಮಿ ಕೆ.ಸಿ. ರಘು (58) ಅವರು ಭಾನುವಾರ ಬೆಳಿಗ್ಗೆ ನಗರದ ಸ್ವಗೃಹದಲ್ಲಿ ನಿಧನರಾದರು.

ಪಾರ್ಥಿವ ಶರೀರವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಲ್ಮನೆಯ ಕೆ.ಸಿ.ರಘು ಅವರು, ಹಲವು ವರ್ಷಗಳ ಕಾಲ ಫುಡ್ ಅಂಡ್ ನ್ಯೂಟ್ರೀಷನ್ ವರ್ಲ್ಡ್ ಎಂಬ ಆಂಗ್ಲ ನಿಯತಕಾಲಿಕದ ಸಂಪಾದಕರಾಗಿದ್ದರು. ಅನೇಕ ದಿನಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆಯುತ್ತಿದ್ದರು. ಸಾಮಾನ್ಯ ವಿಜ್ಞಾನ ಮತ್ತು ಆರ್ಥಿಕತೆಯ ವಿಷಯಗಳನ್ನು ಅತಿಥಿ ಉಪನ್ಯಾಸಕರಾಗಿ ನಿರ್ವಹಿಸಿದ್ದಾರೆ.

ಅವರು ಸ್ಥಾಪಿಸಿದ ಪ್ರಿಸ್ಟೀನ್ ಆರ್ಗ್ಯಾನಿಕ್ಸ್ ಎಂಬ ಸಂಸ್ಥೆಯಲ್ಲಿ ನವಜಾತ ಶಿಶುಗಳಲ್ಲಿ ಕಂಡುಬರುವ ಮಾರಕ ಕಾಯಿಲೆಗಳಿಗೆ ಸಂಶೋಧನೆಯಿಂದ ಪೌಷ್ಟಿಕಾಂಶದ ಪರಿಹಾರವನ್ನು ಕಂಡುಹಿಡಿದು, ದೇಶದಾದ್ಯಂತ ಹಾಗೂ ವಿದೇಶಗಳಿಗೂ ಪೂರೈಸುತ್ತಿದ್ದರು. ಈ ಕಾರ್ಯದಿಂದ ಸುಮಾರು 5 ಸಾವಿರ ನವಜಾತ ಶಿಶುಗಳನ್ನು ಸಾವಿನ ದವಡೆಯಿಂದ ಪಾರು ಮಾಡಲಾಗಿತ್ತು.

ರಘು ಅವರಿಗೆ ಅನೇಕ ವಿಷಯಗಳಲ್ಲಿ ಆಳವಾದ ಜ್ಞಾನವಿತ್ತು. ಹೊಸ ವಿಷಯಗಳನ್ನು ಹುಡುಕುತ್ತಾ ಸದಾ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು. ಅಧ್ಯಯನಕ್ಕಾಗಿ ಒಂದು ಬೃಹತ್ ಲೈಬ್ರರಿಯನ್ನೇ ತೆರೆದಿದ್ದರು. ಅಧ್ಯಯನದ ಜೊತೆಗೆ 'ತುತ್ತು ತತ್ವ', 'ಆಹಾರ ರಾಜಕೀಯ', 'ರಸ ತತ್ವ' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

# ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘ (ರಿ.), ತುಮಕೂರು

## ನೂತನ ಪದಾಧಿಕಾರಿಗಳು



**ಶ್ರೀ ಸಿ.ಎನ್. ಮಹದೇವಯ್ಯ**
ಗೌರವ ಅಧ್ಯಕ್ಷರು
ಶ್ರೀ ನಂಜುಂಡೇಶ್ವರ ಬೇಕರಿ
ಮೊ: 9900118877



**ಶ್ರೀ ವಾಸುದೇವ ಶೆಟ್ಟಿ**
ಅಧ್ಯಕ್ಷರು
ಹೋಟೆಲ್ ವೈಶಾಲಿ ಕಂಫರ್ಟ್ಸ್
ಮೊ: 9448381198




**ಶ್ರೀ ಟಿ.ಜಿ. ವೇದಮೂರ್ತಿ**
ಉಪಾಧ್ಯಕ್ಷರು
ಮಯೂರ ಉಪಾಹಾರ
ಮೊ: 9844777106




**ಶ್ರೀ ಕೆ.ಟಿ. ಗುರುಪ್ರಕಾಶ್**
ಪ್ರಧಾನ ಕಾರ್ಯದರ್ಶಿ
ಗುರು ಹೋಟೆಲ್ ವುಡ್‌ಲ್ಯಾಂಡ್ಸ್
ಮೊ: 9844178784



**ಶ್ರೀ ಆರ್.ಪ್ರವೀಣ್ ಕುಮಾರ್**
ಜಂಟಿ ಕಾರ್ಯದರ್ಶಿ
ಆರ್.ಕೆ. ಸ್ಟ್ರೀಟ್, ತುಮಕೂರು
ಮೊ: 9842261474



**ಶ್ರೀ ಜಿ.ಆರ್. ಶ್ರೀನಿವಾಸ್**
ಖಜಾಂಚಿ
ನ್ಯೂ ಪರಿಮಳ ರೆಸ್ಟೋರೆಂಟ್
ಮೊ: 97416633588



**ಶ್ರೀ ಆರ್. ರಾಜಣ್ಣ**
ಸಂಘಟನಾ ಕಾರ್ಯದರ್ಶಿ
ಶ್ರೀನಿಧಿ ಕಾಫಿ ಕೂಲ್ ಪಾಯಿಂಟ್
ಮೊ: 9481932315

ತುಮಕೂರು ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ನಿರ್ದೇಶಕರುಗಳಾಗಿ ಸರ್ವಶ್ರೀ ಹೆಚ್.ಶ್ರೀನಿವಾಸ ಹತ್ವಾರ್, ಯು.ಸುರೇಶ ಹೊಳ್ಳ, ಟಿ.ಎಸ್.ಪ್ರಕಾಶ್, ಜಿ.ವಿ.ರಾಘವೇಂದ್ರ, ಬಿ.ಉಮೇಶ್, ರಮೇಶ ಮಧ್ಯಸ್ಥ ಪಿ., ಟಿ.ಪಿ.ವಾದಿರಾಜ್, ಕೆ.ಜಿ.ಎಲ್.ರವಿ, ಹೆಚ್.ಎನ್.ಶಶಿಧರ್, ಎಸ್.ರಾಘವೇಂದ್ರ ರಾವ್, ಕೆ.ಎಲ್.ಕಾರ್ತಿಕ್ ಭಟ್, ಜಿ.ನವನೀತ, ಇ.ಎಸ್.ಸಂತೋಷ್ ಕುಮಾರ್, ಎನ್.ಗುರುರಾಜ್, ಬಿ.ಎಸ್.ಸುಬ್ರಹ್ಮಣ್ಯ, ಬಿ.ನಂದೀಶ್, ಜಯಪೂಜಾರಿ ಕೆ. ನಟರಾಜ್ ಅವರುಗಳು ಆಯ್ಕೆಯಾಗಿದ್ದಾರೆ.

# Photo Gallary



Submitting GST reduction memorandum to Finance Minister Ms.Nirmala Seetharaman



Royal Indraprastha,Yelahanka Hotel opening ceremony



Honouring Andhra, Telangana and Tamil Nadu State Hotel Association Presidents



Independence Day Celebration at KSHA Office



Nanjanagud Hotel Assn Celebrating Independence Day



Nanjanagud Hotel Assn disbursing Fruits at Hospital on the occasion of Independence Day

# Photo Gallary



Dakshin Bharath Utsav-Chitradurga function



Felicitation to Sri Kapil Mohan, IAS and Welcoming to Sri T K Anil Kumar IAS, Tourism Dept.



Hon.Secretary with Mr Ajay Bhat, Minister of State for Tourism, Govt of India


KINGS Kitchen Equipments
MANUFATURING, SALES & SERVICES
Commercial Kitchen Equipments, Commercial Refrigerators
Hospital SS Furniture, Catering Equipments, Water Chiller Units, Milk Chiller,
Steam Cooking Equipment, Grinder, Dining Table, Bain Marie Counter, Deep Freezers,
Bottle Coolers, Water Coolers, Chilling Plants, Ice candy Plants, Display Units, Sweet Counters

KPHRA VARTHE ENGLISH & KANNADA MONTHLY Reg. No./KA/BGW/1832/2021-2023 | RNI No. KARBIL/2019/78029
Posted at Bengaluru PSO, Bengaluru-560 026 on 11th or 14th of every Month | Pages: 20 | PMG BG/WPP-395/2021-2023
Date of Published 8th of Every Month
Permitted on 18.11.2021




KORAMANGALA | INDIRANAGAR | KAMMANAHALLI | MARATHAHALLI | SAHAKAR NAGAR | BOMMASANDRA

HOTEL
LA SARA
( Formerly known as Nandhana Group of Hotels )

No. 52, 5th Cross, 6th Block, 60ft Road,
Koramangala, Bangalore - 560 095
**Ph: +91-80-41858299**
**9980018236, 9980029797**
E: reservations@lasarahotels.com
www.lasarahotels.com

KPHRA VARTHE Kannada & English Monthly Printed & Published by B. Chandrashekar Hebbar, President, on behalf of Karnataka Pradesh Hotel & Restaurant Association (R). No. 1, Vishwambara, KPHRA, Golden Jubilee Bhavan, 3rd Floor, 2nd Main, Seshadripuram, Bengaluru-560 020 & Printed at Sri P.S. Venkatesh Babu, Omkar Offset Printers, No. 3/3, 1st Main Road, New Tharagupet, Bangalore-560 002.